**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:2**

**ಸ್ಪೆಷಲ್ ಕೇಸ್ ಸಂಖ್ಯೆ: 510/23 ಸಿಡಬ್ಲ್ಯೂ:2**

**ಸಾಕ್ಷಿದಾರರ ಹೆಸರು** : ಸುಕುಮಾರ

**ತಂದೆ ಹೆಸರು** : ಮಾಚ

**ವಯಸ್ಸು** : 45

**ವೃತ್ತಿ** : ಗಾರೆ ಕೆಲಸ

**ವಾಸ** : ಪಡುಕೋಣೆ

**ದಿನಾಂಕ: 17-03-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ಚಾಸಾ.1 ಸುರೇಶ್ ನನ್ನ ಭಾವ. ನನಗೆ ಆರೋಪಿತರ ಪರಿಚಯ ಇದೆ. ನಾನು ಪರಿಶಿಷ್ಟ ಆದಿದ್ರಾವಿಡ ಜಾತಿಗೆ ಸೇರಿದವನು. ಆರೋಪಿತರೆಲ್ಲರೂ ಮೇಲ್ ಜಾತಿಗೆ ಸೇರಿದವರಾಗಿರುತ್ತಾರೆ. ನನ್ನ ಭಾವ ಆರೋಪಿಗಳ ವಿರುದ್ಧ ಏನು ದೂರು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ನನಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ. ನನ್ನ ಭಾವನಿಗೂ ಮತ್ತು ಬೇರೆ ಯಾರಿಗೆ ಆರೋಪಿತರು ಜಾತಿ ನಿಂದನೆ ಮಾಡಿರುತ್ತಾರೆ ಅವಾಚ್ಯವಾಗಿ ಬೈದಿರುತ್ತಾರೆ ಮತ್ತು ಹಲ್ಲೆ ಮಾಡಿರುತ್ತಾರೆ ಎಂದು ನಾನು ನೋಡಿರುವುದಿಲ್ಲ. ನಾನು ನನ್ನ ಮನೆ ಹತ್ತಿರ ಕೆಲಸ ಮಾಡುವಾಗ ಬಿದ್ದು ಪೆಟ್ಟಾದ ಬಗ್ಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದಲ್ಲಿರುವಂತಹಾ ಸ್ವತ್ತುಗಳನ್ನು ನೋಡಿ ಗುರುತಿಸಿರುವುದಿಲ್ಲ.

**(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)**

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

ದಿನಾಂಕಃ20-09-2023 ರಂದು ರಾತ್ರಿ 10.05 ಗಂಟೆಗೆ ನಮ್ಮ ಪಕ್ಕದ ಮನೆಯಲ್ಲಿ ವಾಸವಾಗಿದ್ದ ಚಾಸಾ.1 ನೇಯವರು ನಮ್ಮ ಮನೆಯ ಹತ್ತಿರ ಬಂದು ಆದಿತ್ಯ ಪೂಜಾರಿ ನನಗೆ ಫೋನ್ ಮಾಡಿ ಮಾತನಾಡಲಿಕ್ಕೆ ಇದೆ ಗುಡ್ಡೆಯಂಗಡಿ ಚಂದ್ರಿಕಾ ಬಾರ್ ಬಳಿಗೆ ಬರುವಂತೆ ತಿಳಿಸಿದ್ದು ನಾನು, ಚಾಸಾ.1 ಮತ್ತು 3 ನೇಯವರೊಂದಿಗೆ ನಾಡಾ ಗ್ರಾಮದ ಗುಡ್ಡೆಯಂಗಡಿಯಲ್ಲಿರುವ ಚಂದ್ರಿಕಾ ಬಾರ್ ಆ್ಯಂಡ್ ರೆಸ್ಟೋರೆಂಟ್ ಬಳಿ ರಾತ್ರಿ 10.15 ಗಂಟೆಗೆ ಹೋಗಿದ್ದು ಅಲ್ಲಿಗೆ ಚಾಸಾ.4 ನೇಯವರು ಕೂಡಾ ಬಂದಿರುತ್ತಾರೆ. ಚಂದ್ರಿಕಾ ಬಾರ್ ಆ್ಯಂಡ್ ರೆಸ್ಟೋರೆಂಟ್ ಬಳಿ ಆರೋಪಿತರೆಲ್ಲರೂ ಏಕೋದ್ದೇಶದಿಂದ ಸೇರಿಕೊಂಡಿದ್ದು, ಆರೋಪಿ ಆದಿತ್ಯ ಪೂಜಾರಿ ಚಾಸಾ.1 ನೇಯವರನ್ನು ಚಂದ್ರಿಕಾ ಬಾರ್ ಆ್ಯಂಡ್ ರೆಸ್ಟೋರೆಂಟ್ ಕಡೆಯಿಂದ ರಸ್ತೆ ಕಡೆಗೆ ದೂಡಿಕೊಂಡು ಹೋಗಿ ಸಾರ್ವಜನಿಕ ಸ್ಥಳದಲ್ಲಿ ಅವರಿಗೆ ಬೋಳಿ ಮಗನೇ, ಸೂಳೇ ಮಗನೇ ನೀವು ಕೂಸಾ ಜಾತಿಯವರು, ಕಸದ ಗಾಡಿ ಓಡಿಸುವ ಕೂಸಾಳು ಕೊರಗರಲ್ಲಿ ಕ್ಷಮೆ ಕೇಳುವಂತೆ ಮಾಡಿದ್ದೀಯಾ ಎಂದು ಅವಾಚ್ಯವಾಗಿ ಬೈದು ಆರೋಪಿತರೆಲ್ಲರೂ ಕೈಯಿಂದ ಚಾಸಾ.1 ನೇಯವರ ಮೈ ಕೈಗೆ ಹೊಡೆದಿದ್ದಲ್ಲದೇ ಆರೋಪಿ ಸಂತೋಷ ಅಲ್ಲೇ ರಸ್ತೆಯ ಬದಿಯಲ್ಲಿ ಬಿದ್ದಿದ್ದ ಮರದ ದೊಣ್ಣೆಯನ್ನು ತೆಗೆದುಕೊಂಡು ಬಂದು ಚಾಸಾ.1 ನೇಯವರ ತಲೆಯ ಹಿಂಬದಿಗೆ ಹೊಡೆದಿರುತ್ತಾನೆ ಎಂದರೆ ಸರಿ ಅಲ್ಲಾ. ಚಾಸಾ.1 ನೇಯವರು ಮೊಗ್ಗರಿಸಿ ಕಾಂಕ್ರೀಟ್ ರಸ್ತೆಯಲ್ಲಿ ಬಿದ್ದಾಗ ಅವರನ್ನು ತಪ್ಪಿಸಲು ಹೋದ ನನಗೆ ಮತ್ತು ಚಾಸಾ.3 ನೇಯವರಿಗೂ ಕೂಡಾ ಆರೋಪಿತರು ಕೈಗಳಿಂದ ಹೊಡೆದು ಕಾಲಿನಿಂದ ಎದೆಗೆ ಮತ್ತು ಹೊಟ್ಟೆಗೆ ತುಳಿದಿರುತ್ತಾರೆ ಎಂದರೆ ಸರಿ ಅಲ್ಲಾ. ನಂತರ ಬಂದ ಚಾಸಾ.4 ನೇಯವರಿಗೆ ಆರೋಪಿ ಆದಿತ್ಯ, ದೀಪಕ್ ಮತ್ತು ಸಂತೋಷ ಕೈಗಳಿಂದ ಹೊಡೆದಿರುತ್ತಾರೆ ಎಂದರೆ ಸರಿ ಅಲ್ಲಾ. ಚಾಸಾ.5 ನೇಯವರು ಕೂಡಾ ಚಾಸಾ.1 ನೇಯವರ ಸಪೋರ್ಟಿಗೆ ಬಂದವರೆಂದು ತಿಳಿದು ಆದಿತ್ಯ ಮತ್ತು ದೀಪಕ್ ಕೈಗಳಿಂದ ಅವರಿಗೆ ಹೊಡೆದಿರುತ್ತಾರೆ ಎಂದರೆ ಸರಿ ಅಲ್ಲಾ. ಆರೋಪಿತರ ಹಲ್ಲೆಯಿಂದ ಚಾಸಾ.1 ನೇಯವರ ಟೀ ಶರ್ಟು ಹರಿದು ಹೋಗಿತ್ತು ಎಂದರೆ ಸರಿ ಅಲ್ಲಾ. ಆರೋಪಿತರು ಮಾಡಿದ ಹಲ್ಲೆಯಿಂದ ಗಾಯಗೊಂಡ ನಾನು ಮತ್ತು ಚಾಸಾ.1 ನೇಯವರು ಚಿಕಿತ್ಸೆಗಾಗಿ ಕುಂದಾಪುರ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ ಎಂದರೆ ಸರಿ ಅಲ್ಲಾ.

ದಿನಾಂಕಃ20-09-2023 ರಂದು ನಾಡಾ ಗ್ರಾಮದ ಪ್ರಸನ್ನ ಗಣಪತಿ ದೇವಸ್ಥಾನದಲ್ಲಿ ಕುಳ್ಳಿರಿಸಿದ ಗಣಪತಿ ಮೂರ್ತಿಯ ವಿಸರ್ಜನೆಯ ಮೆರವಣಿಗೆ ಸಮಯ ಚಾಸಾ.4

ರೋಹಿತ್ ಡ್ಯಾನ್ಸ ಮಾಡುವಾಗ ಆರೋಪಿ ಸನತ್ ಶೆಟ್ಟಿಗೆ ಕಾಲು ತಾಗಿದ ವಿಚಾರಕ್ಕೆ ಮಾತಿನ ಜಗಳವಾಗಿದ್ದು ಚಾಸಾ.1 ನೇಯವರು ಗಣೇಶೋತ್ಸವ ಸೇವಾ ಸಮಿತಿಯವರಿಗೆ ದೂರು ನೀಡಿ ಆರೋಪಿ ಸನತ್ ಶೆಟ್ಟಿ ಮತ್ತು ಆದಿತ್ಯ ಪೂಜಾರಿಯವರು ಚಾಸಾ.1 ಮತ್ತು ಚಾಸಾ.4 ನೇಯವರಲ್ಲಿ ಕ್ಷಮೆ ಕೇಳುವಂತೆ ಮಾಡಿದ್ದಕ್ಕೆ ಕೋಪಗೊಂಡು ನಾವು ಪರಿಶಿಷ್ಟ ಜಾತಿಗೆ ಸೇರಿದವರೆಂದು ತಿಳಿದೂ ಕೂಡಾ ಸಾರ್ವಜನಿಕವಾಗಿ ಅವಮಾನ ಮಾಡುವ ಉದ್ದೇಶದಿಂದ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದ್ದು ಬಿಡಿಸಲು ಬಂದ ಚಾಸಾ.3 4 ಮತ್ತು 5 ನೇಯವರಿಗೂ ಆರೋಪಿತರು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ ಅಲ್ಲಾ. ಈ ಬಗ್ಗೆ ನಾನು ಪೋಲೀಸರಿಗೆ ದಿನಾಂಕಃ21-09-2023 ರಂದು ನನಗೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು.

ನಾನು, ನನ್ನ ಭಾವ ಚಾಸಾ.1 ಮತ್ತು ನಮ್ಮ ಕುಟುಂಬದ ಸದಸ್ಯರು ಆರೋಪಿಗಳೊಂದಿಗೆ ರಾಜೀ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

<u>ಪಾಟೀ ಸವಾಲುಃ</u> ಆರೋಪಿತರ ಪರ ವಕೀಲರಾದ ಶ್ರೀ ಕೆ ಪಿ ಕೆ ಎಸ್ ವಕೀಲರಿಂದ ಹಾಜರಿದ್ದು ಪಾಟೀ ಸವಾಲು ಇಲ್ಲಾ ಇಲ್ಲಾ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕುಂದಾಪುರ